# A

# CCE RR
## REVISED

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಸೆಪ್ಟೆಂಬರ್, 2020**

**S.S.L.C. EXAMINATION, SEPTEMBER, 2020**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 24. 09. 2020 ] **ಸಂಕೇತ ಸಂಖ್ಯೆ : 33-K**

Date : 24. 09. 2020 ] **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 1. | 'ಸುವರ್ಣಾಕ್ಷರ' ಪದದಲ್ಲಿರುವ ಸಂಧಿ<br>(ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ<br>(ಸಿ) ವೃದ್ಧಿ ಸಂಧಿ (ಡಿ) ಯಣ್ ಸಂಧಿ<br>***ಉತ್ತರ :*** (ಎ) ಸವರ್ಣದೀರ್ಘ ಸಂಧಿ | |
| 2. | 'ಸಾರಂಗ' ಪದದ ಅರ್ಥ<br>(ಎ) ವೈಭವ (ಬಿ) ಪಕ್ಷಿ<br>(ಸಿ) ಚಂದಿರ (ಡಿ) ಜಿಂಕೆ<br>***ಉತ್ತರ :*** (ಡಿ) ಜಿಂಕೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | 'ಹೊಚ್ಚ ಹೊಸದು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ<br>(ಎ) ಅನುಕರಣಾವ್ಯಯ (ಬಿ) ಜೋಡುನುಡಿ<br>(ಸಿ) ದ್ವಿರುಕ್ತಿ (ಡಿ) ಸರ್ವನಾಮ<br>***ಉತ್ತರ :*** (ಸಿ) ದ್ವಿರುಕ್ತಿ | |
| 4. | 'ರುಚಿಯನ್ನು' ಪದದಲ್ಲಿರುವ ವಿಭಕ್ತಿಯ ಹೆಸರು<br>(ಎ) ಪ್ರಥಮ (ಬಿ) ದ್ವಿತೀಯಾ<br>(ಸಿ) ತೃತೀಯಾ (ಡಿ) ಚತುರ್ಥಿ<br>***ಉತ್ತರ :*** (ಬಿ) ದ್ವಿತೀಯಾ | |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :**<br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 12 × 1 = 12 |
| 5. | ಬೇಡನು ಏಕೆ ವಿಷ ಸವರಿದ ಬಾಣಗಳನ್ನು ಬಿಡುತ್ತಿದ್ದನು ?<br>***ಉತ್ತರ :***<br>ಬಾಣ ತಗುಲಿದ ಕೂಡಲೇ ಪ್ರಾಣಿಗಳು ಸಾಯಲಿ ಎಂದು ಬೇಡನು ವಿಷ ಸವರಿದ ಬಾಣಗಳನ್ನು ಬಿಡುತ್ತಿದ್ದನು. | |
| 6. | ಪುಟ್ಟರಾಜರು ಖಾದಿ ಬಟ್ಟೆ ತೊಡುವ ಮೂಲಕ ಯಾವ ಆಂದೋಲನಕ್ಕೆ ಕೈಜೋಡಿಸಿದರು ?<br>***ಉತ್ತರ :***<br>ಪುಟ್ಟರಾಜರು ಖಾದಿ ಬಟ್ಟೆ ತೊಡುವ ಮೂಲಕ ಸ್ವದೇಶಿ ಆಂದೋಲನಕ್ಕೆ ಕೈಜೋಡಿಸಿದರು. | |
| 7. | ಹಕ್ಕಿಗಳ ಗೂಡಿನಲ್ಲಿ ಯಾವುದರ ಸಮನ್ವಯತೆಯನ್ನು ಕಾಣಬಹುದು ?<br>***ಉತ್ತರ :***<br>ಹಕ್ಕಿಗಳ ಗೂಡಿನಲ್ಲಿ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನ ಸಮನ್ವಯಗೊಂಡಿದೆ. | |
| 8. | ಗುರುಗಳು ತಿಳಿಸಿದಂತೆ ಕಾಫೀ ಮತ್ತು ಕಪ್ಪು ಯಾವುದರ ಪ್ರತೀಕಗಳಾಗಿವೆ ?<br>***ಉತ್ತರ :***<br>ಗುರುಗಳು ತಿಳಿಸಿದಂತೆ ಜೀವನ ಎಂದರೆ ಕಾಫಿ ಇದ್ದಂತೆ. ಹಣ ಅಂತಸ್ತು, ಅಧಿಕಾರ ಇವು ಕಪ್ಪುಗಳ ಪ್ರತೀಕವಾಗಿವೆ. | |
| 9. | ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳ ಹೆಸರನ್ನು ತಿಳಿಸಿ.<br>***ಉತ್ತರ :***<br>ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳೆಂದರೆ ಕೇಂಬ್ರಿಜ್ ಹಾಗೂ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 10. | ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಏಕೆ ಭಯಪಡುತ್ತಿದ್ದನು ?<br>***ಉತ್ತರ :***<br>ಗೋಪಾಲನು ಶಾಲೆಯಿಂದ ಕಾಡು ದಾಟಿ ಸಂಜೆಹೊತ್ತಿನಲ್ಲಿ ಒಬ್ಬನೇ ಮನೆಗೆ ಮರಳುವುದಕ್ಕೆ ಭಯಪಡುತ್ತಿದ್ದನು. | |
| 11. | ಏಣಿ ಜನರಿಗೆ ಮಾಡಿದ ಉಪಕಾರ ಯಾವುದು ?<br>***ಉತ್ತರ :***<br>ಏಣಿ ಜನರಿಗೆ ಹತ್ತುವುದಕ್ಕೆ, ಇಳಿಯುವುದಕ್ಕೆ ಸಹಕಾರಿಯಾಗಿದೆ. | |
| 12. | ಏಣಿ ತಾನು ಯಾವುದಕ್ಕೆ ಕರಗುತ್ತೇನೆಂದು ಹೇಳುತ್ತದೆ ?<br>***ಉತ್ತರ :***<br>ಏಣಿ ತಾನು ನಮ್ರತೆಗೆ ಕರಗುತ್ತೇನೆಂದು ಹೇಳುತ್ತದೆ. | |
| 13. | ಯುಗಾದಿ ಹಬ್ಬದಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ ?<br>***ಉತ್ತರ :***<br>ಯುಗಾದಿ ಹಬ್ಬದಲ್ಲಿ ಬೇವು–ಬೆಲ್ಲವನ್ನು ಹಂಚುವ ಸಂಪ್ರದಾಯವಿದೆ. | |
| 14. | ಜನಪದರು ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?<br>***ಉತ್ತರ :***<br>ಜನಪದರು ತುಂಬಿದ ಕುಣಿಗಲ್ ಕೆರೆಯನ್ನು ನಿಂಬೆಹಣ್ಣಿಗೆ ಹೋಲಿಸಿದ್ದಾರೆ. | |
| 15. | ಕೆರೆಗಳು ನಿಷ್ಪ್ರಯೋಜಕವಾಗುವುದು ಯಾವಾಗ ?<br>***ಉತ್ತರ :***<br>ಕೆರೆಗಳು ನೀರಿಲ್ಲದಿದ್ದರೆ ನಿಷ್ಪ್ರಯೋಜಕವಾಗುತ್ತವೆ. | |
| 16. | ಉತ್ತರನು ನಿಟ್ಟೋಟದಲಿ ಏಕೆ ಓಡಿದನು ?<br>***ಉತ್ತರ :***<br>ಕೌರವನ ಸೇನಾಸಾಗರವನ್ನು ನೋಡಿ ಭಯಗೊಂಡು ಉತ್ತರನು ನಿಟ್ಟೋಟದಲಿ ಓಡಿದನು. | |
| III. | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) | $8 \times 2 = 16$ |
| 17. | ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು ?<br>***ಉತ್ತರ :***<br>ನಮ್ಮ ದೇಶದ ರಕ್ಷಣಾಪಡೆ ಪ್ರಬಲವಾಗಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಲಾರರು. ಸೈನಿಕರು ಪ್ರಬಲರಾಗಿದ್ದಾಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ. ಆದುದರಿಂದ ನಮ್ಮ ರಕ್ಷಣಾಪಡೆ ತುಂಬಾ ಪ್ರಬಲವಾಗಿರಬೇಕು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ಪುಟ್ಟರಾಜ ಗವಾಯಿಗಳ ವೇಷಭೂಷಣಗಳು ಹೇಗಿದ್ದವು ?<br>***ಉತ್ತರ :***<br>ಶುಭ್ರವಾದ ಬಿಳಿಯ ಉದ್ದನೆಯ ಖಾದಿ ಅಂಗಿ, ಪಂಚೆ (ದೋತರ), ತಲೆಗೆ ಕೆಂಪು ಪೇಟ (ಪಟಗ), ನೊಸಲಲ್ಲಿ ತ್ರಿಪುಂಡ್ರ ಭಸ್ಮ, ಕೊರಳಿನಲ್ಲಿ ರುದ್ರಾಕ್ಷಿಮಾಲೆ, ಪಾದಗಳಿಗೆ ಅರಿವೆಯ ಪಟ್ಟಿಕೆಯನ್ನು ಜೋಡಿಸಿದ ಕಟ್ಟಿಗೆಯ ಆವುಗೆ, ಕೈಯಲ್ಲಿ ಉದ್ದನೆಯ ಬೆತ್ತ ಇವು ಪುಟ್ಟರಾಜರ ವೇಷಭೂಷಣಗಳಾಗಿದವು. | |
| 19. | ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು ?<br>***ಉತ್ತರ :***<br>ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ. ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು ಗೂಡು ಕಟ್ಟುತ್ತವೆ. ಮರಳಿನ ಹೊಡೆತ, ಪ್ರಖರ ಸೂರ್ಯರಶ್ಮಿ ಮುಂತಾದ ಹವಾಮಾನ ವೈಪರೀತ್ಯಗಳನ್ನು ಪ್ರತಿರೋಧಿಸಲು ಗೂಡನ್ನು ನಿರ್ಮಿಸುತ್ತವೆ. ಮೊಟ್ಟೆ, ಮರಿಗಳನ್ನು ರಕ್ಷಿಸಿಕೊಳ್ಳಲು, ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಹಕ್ಕಿಗಳು ಗೂಡು ನಿರ್ಮಿಸುತ್ತವೆ. | |
| 20. | ಗುರುಗಳು ಸುಖಜೀವನದ ಪಾಠವನ್ನು ವಿದ್ಯಾರ್ಥಿಗಳಿಗೆ ಹೇಗೆ ತಿಳಿಸಿದರು ?<br>***ಉತ್ತರ :***<br>ಭಗವಂತ ನಮಗೆ ಜೀವನ ಎನ್ನುವ ಕಾಫಿ ಕೊಟ್ಟಿದ್ದಾನೆ. ಅವನು ಕೊಡುವುದು ಕಾಫಿಯನ್ನು ಮಾತ್ರ. ಕಪ್ಪುಗಳನ್ನಲ್ಲ. ಹಣ, ಅಂತಸ್ತು, ಅಧಿಕಾರ ಇವೆಲ್ಲ ಕಪ್ಪುಗಳಿದ್ದಂತೆ. ನಾವು ಈ ಜೀವನವನ್ನು ಆಸ್ವಾದಿಸಬೇಕು. ಅಲಂಕಾರಗಳ ಬೆನ್ನು ಹತ್ತಿ ಓಡಿ ಓಡಿ ಜೀವನವನ್ನು ಮರೆಯಬಾರದು. ಸಿಕ್ಕಿರುವುದನ್ನು ಚೆನ್ನಾಗಿ ಆಸ್ವಾದಿಸುವುದನ್ನು ಕಲಿಯಬೇಕು. ಕಪ್ಪುಗಳ ಚಿಂತೆ ಬಿಡಿ, ಕಾಫಿಯನ್ನು ಆಸ್ವಾದಿಸಿ ಎಂದು ಗುರುಗಳು ಸುಖಜೀವನದ ಪಾಠವನ್ನು ಹೇಳಿದರು. | |
| 21. | ಕುಣಿಗಲ್ ಕೆರೆಯ ಸೊಬಗು ನೋಡುವವರಿಗೆ ಹೇಗೆ ಕಾಣುತ್ತಿತ್ತು ?<br>***ಉತ್ತರ :***<br>ಕುಣಿಗಲ್ ಕೆರೆ ನೋಡುವವರಿಗೆ ಒಂದು ವೈಭವದಂತೆ, ಮನಸ್ಸಿಗೆ ಆನಂದವನ್ನು ನೀಡುವಂತೆ ಕಾಣುತ್ತಿತ್ತು. ಇದು ಸಂತೆಯ ಹಾದಿಯಲ್ಲಿದ್ದು, ಕಲ್ಲುಕಟ್ಟೆಯಿಂದ ಸುಂದರವಾಗಿ ನಿರ್ಮಾಣಗೊಂಡಿತ್ತು. ಇದು ಬಾಳೆಯಹಣ್ಣಿನಂತೆ ಬಾಗಿಕೊಂಡು, ನಿಂಬೆಯ ಹಣ್ಣಿನಂತೆ ತುಂಬಿಕೊಂಡಂತೆ ಕಾಣಿಸುತ್ತಿತ್ತು. ಇದು ತನ್ನ ಸೊಬಗಿನಿಂದ ಎಂಥವರನ್ನೂ ಬೆರಗುಗೊಳಿಸುವಂತೆ ಕಾಣುತ್ತಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

22. ಬಸವಣ್ಣನವರು ಜನರ ಮೌಢ್ಯತೆಯನ್ನು ಯಾವ ರೀತಿ ಖಂಡಿಸಿದ್ದಾರೆ ?

***ಉತ್ತರ :***

ಬಸವಣ್ಣನವರು ಜನರ ಮೌಢ್ಯತೆಯನ್ನು ಖಂಡಿಸಿದ್ದಾರೆ. ಏಕೆಂದರೆ ಜನರು ನೀರು ಕಂಡಲ್ಲಿ ಮುಳುಗುವರು. ಮರವನ್ನು ಕಂಡಲ್ಲಿ ಸುತ್ತುತ್ತಾರೆ. ಬತ್ತುವ ಜಲವನ್ನು, ಒಣಗುವ ಮರವನ್ನು ನಂಬಿದ ಜನರು ಬತ್ತದೇ ಇರುವ, ಒಣಗದೇ ಇರುವ ಸದಾ ಶಾಶ್ವತನಾದ ಪರಮಾತ್ಮನನ್ನು ಮರೆತಿದ್ದಾರೆ ಎಂದು ಖಂಡಿಸಿದ್ದಾರೆ.

23. ಭೀಮನಾಯಕನು ವೈದ್ಯರ ವಸ್ತುಗಳನ್ನು ಏಕೆ ಹಿಂತಿರುಗಿಸಿದನು ?

***ಉತ್ತರ :***

ವೈದ್ಯರು ನೀಡಿದ ಔಷಧೋಪಚಾರದಿಂದ ಭೀಮನಾಯಕನ ಮಗು ಬದುಕಿತು. ಇದರಿಂದ ಭೀಮನಾಯಕನಿಗೆ ಸಂತೋಷವಾಯಿತು. ಜೊತೆಗೆ ತಾನು ಮಾಡಿದ ತಪ್ಪಿನ ಅರಿವಾಯಿತು. ಇನ್ನು ಮುಂದೆ ಕಳ್ಳತನ ಮಾಡಬಾರದು ಎಂದು ತೀರ್ಮಾನಿಸಿ ವೈದ್ಯರ ಮನೆಯಿಂದ ಕದ್ದುಕೊಂಡು ಹೋಗಿದ್ದ ವಸ್ತುಗಳನ್ನು ಹಿಂತಿರುಗಿಸಿದನು. ಈ ಮೂಲಕ ತನ್ನ ಮಗುವನ್ನು ಬದುಕಿಸಿದ ವೈದ್ಯರಿಗೆ ಕೃತಜ್ಞತೆ ಸಲ್ಲಿಸಿದನು.

24. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕೆಂದು ಕವಯಿತ್ರಿಯ ಆಶಯವಾಗಿದೆ ?

***ಉತ್ತರ :***

ಕವಯಿತ್ರಿಯು ತಿಳಿಸುವಂತೆ ಮನುಕುಲದ ಭವ್ಯ ಬದುಕು ಜೈವಿಕ ಇಂಧನದಿಂದ ಅರಳಬೇಕಿದೆ. ತೆಂಗನ್ನು ಬೆಳೆಯುತ್ತಾ ಅದರಿಂದ ತೈಲಧಾರೆ ಹೊಮ್ಮಿ ಬರಬೇಕು. ಹೊಂಗೆ, ಹಿಪ್ಪೆಗಳ ಜೀವಮೇಳ ನಡೆದು ಅದರಿಂದಲೂ ತೈಲಧಾರೆ ಹೊಮ್ಮಿ ಬರಬೇಕು. ಮುಗಿದು ಹೋಗುತ್ತಿರುವ ತೈಲಸಂಪತ್ತು ಜೈವಿಕ ಇಂಧನದ ಮೂಲಕ ತುಂಬಿ ಬರಬೇಕು. ಜೈವಿಕ ಇಂಧನ ಪಳೆಯುಳಿಕೆ ಇಂಧನಕ್ಕೆ ಪರ್ಯಾಯವಾಗಿ ಬರುವ ಮೂಲಕ ಮನುಕುಲವನ್ನು ಬೆಳಗಿ, ಮನುಕುಲದ ಭವ್ಯ ಬದುಕು ಅರಳಬೇಕಿದೆ.

IV. **ಕವಿ / ಸಾಹಿತಿಯವರ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** 1 × 3 = 3

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿಗಳು, ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| ಒಟ್ಟು | 3 ಅಂಕಗಳು |

25. ಅ.ರಾ. ಮಿತ್ರ

***ಉತ್ತರ :***

ಇವರ ಪೂರ್ಣ ಹೆಸರು ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ. ಇವರು ೧೯೩೫ ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ಎಂಬ ಗ್ರಾಮದಲ್ಲಿ ಜನಿಸಿದರು. ಇವರು 'ಆರತಕ್ಷತೆ ಮತ್ತು ಇತರ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪ್ರಬಂಧಗಳು', 'ನಾನೇಕೆ ಕೊರೆಯುತ್ತೇನೆ ಮತ್ತು ಇತರ ಪ್ರಬಂಧಗಳು', 'ಛಂದೋಮಿತ್ರ', 'ಕನ್ನಡ ಮೇಘದೂತ', 'ಮಹಾಭಾರತ ಪಾತ್ರ–ಸಂಗತಿಗಳು', 'ವಚನಕಾರರು ಮತ್ತು ಶಬ್ದಕಲ್ಪ', 'ಒಳನೋಟಗಳು', 'ಕವಿಗಳ ಬೆನ್ನೇರಿ', 'ಕೈಲಾಸಂ ಬದುಕು–ಬರಹ' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, 'ಕಾವ್ಯಾನಂದ ಪುರಸ್ಕಾರ', 'ಗೊರೂರು ಸಾಹಿತ್ಯ ಪ್ರಶಸ್ತಿ' ಹಾಗೂ ಧರ್ಮಶ್ರೀ ನಗೆರಾಜ ಪ್ರಶಸ್ತಿಗಳು ಲಭಿಸಿವೆ. | |
| V. | **ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :** | 1 × 3 = 3 |
| | ಪಾಠ್ಯಾಂಶಕ್ಕೆ | 2 ಅಂಕಗಳು |
| | ಪದ ಬಳಕೆ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 26. | ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು,<br>ದೀಪದೆದುರಿಗೆ ತಿಮಿರ ಸರಿಯುವಂತೆ<br>ಶಾಂತಿಯಲಿ ಬದುಕಿನೀ ಕರ್ತವ್ಯವನು ಮುಗಿಸು;<br>ಕೂಗಾಡಿ, ಹಾರಾಡಿ ಫಲವದೇನು ? | |
| | ***ಉತ್ತರ :*** | |
| | ಆಡಂಬರ, ಪ್ರದರ್ಶನಕ್ಕೆ ಜನ ಮನಸೋಲುತ್ತಿದ್ದಾರೆ. ಹೆಸರು, ಕೀರ್ತಿ, ಸಂಪತ್ತನ್ನು ಗಳಿಸುವುದೇ ಜೀವನದ ಸಾರ್ಥಕತೆಯೆಂದು ಜನ ಭಾವಿಸಿದ್ದಾರೆ. ಆದರೆ ಇವೆಲ್ಲಕ್ಕಿಂತಲೂ ಶಾಂತಿ, ಸಹನೆ, ಮೌನ, ಪ್ರೀತಿಯಿಂದ ನಮ್ಮ ಕರ್ತವ್ಯವನ್ನು ಮಾಡಬೇಕು. ತಟ್ಟೆಯಲ್ಲಿರುವ ಕರ್ಪೂರ ಮೌನವಾಗಿ ಕರಗಿ ಇರುವಷ್ಟು ಸಮಯ ಬೆಳಕನ್ನು ಸುತ್ತಲೂ ನೀಡಿ ತನ್ನ ಅವಶೇಷಗಳೇ ಇಲ್ಲದೆ ಮರೆಯಾಗುವಂತೆ, ನಮ್ಮ ಕೆಲಸಕಾರ್ಯಗಳನ್ನು ಮಾಡಬೇಕು. ದೀಪದ ಬೆಳಕು ಕಂಡ ಕ್ಷಣ ಕತ್ತಲೆ ಮರೆಯಾಗುವಂತೆ, ಶಾಂತಿಯಿಂದ ಸಹನೆಯಿಂದ ಬದುಕಿನ ಕರ್ತವ್ಯವನ್ನು ಮಾಡಿ ಮುಗಿಸಬೇಕು. ಸುಮ್ಮನೇ ಕೂಗಾಡಿ, ಹಾರಾಡಿದರೆ ಅದರಿಂದ ಏನೂ ಪ್ರಯೋಜನವಿಲ್ಲ. ಮೌನಕ್ಕೆ ಇರುವ ಶಕ್ತಿ ಗದ್ದಲಕ್ಕೆ ಇರಲಾರದು. ಮೌನ ಶಾಂತಿಯ, ಸಮಾಧಾನದ ಪ್ರತೀಕ, ಇದನ್ನು ಪ್ರಕೃತಿಯಲ್ಲಿ ನಾವು ದಿನನಿತ್ಯ ನೋಡುತ್ತಿರುತ್ತೇವೆ. ಪ್ರಕೃತಿಯು ಯಾವುದೇ ಸದ್ದುಗದ್ದಲವಿಲ್ಲದೆ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಲೇ ಇದೆ. ಇದನ್ನು ನೋಡಿ ನಾವು ಕಲಿಯಬೇಕೆಂದು ಕವಿಗಳು ಈ ಪದ್ಯದ ಮೂಲಕ ತಿಳಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VI. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಮತ್ತು ಸಮನ್ವಯಗೊಳಿಸುವುದು | 2 ಅಂಕಗಳು |
| | ಒಟ್ಟು | 3 ಅಂಕಗಳು |
| 27. | "ಮಿಂಚು ಹುಳು ದೀಪದಂತೆ ಬೆಳಗಿತು"<br>***ಉತ್ತರ :***<br>*ಅಲಂಕಾರದ ಹೆಸರು* : ಉಪಮಾಲಂಕಾರ<br>*ಲಕ್ಷಣ* : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು 'ಉಪಮಾಲಂಕಾರ' ಎನ್ನುತ್ತೇವೆ.<br>*ಉಪಮೇಯ :* ಮಿಂಚುಹುಳು<br>*ಉಪಮಾನ :* ದೀಪ<br>*ಉಪಮಾವಾಚಕ :* ಅಂತೆ<br>*ಸಮಾನಧರ್ಮ :* ಬೆಳಗುವುದು<br>*ಸಮನ್ವಯ :* ಇಲ್ಲಿ 'ಮಿಂಚುಹುಳು' ಎಂಬ ಉಪಮೇಯವನ್ನು 'ದೀಪ' ಎಂಬ ಉಪಮಾನಕ್ಕೆ 'ಅಂತೆ' ಎಂಬ ಉಪಮಾವಾಚಕದ ಮೂಲಕ 'ಬೆಳಗುವುದು' ಎಂಬ ಸಮಾನಧರ್ಮವನ್ನು ಹೇಳಿ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ. | |
| VII. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | "ಕೈಕೆಸರಾದರೆ ಬಾಯಿ ಮೊಸರು"<br>***ಅಥವಾ***<br>"ಗಿಡವಾಗಿ ಬಗ್ಗದ್ದು; ಮರವಾಗಿ ಬಗ್ಗೀತೆ" | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VIII. | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 5 × 3 = 15 |
| | ಕೃತಿ, ಕರ್ತೃ, ಪಠ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 29. | "ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ."<br>***ಉತ್ತರ :***<br>ಈ ಮೇಲಿನ ವಾಕ್ಯವನ್ನು ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ಬರೆದಿರುವ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ಅಸಿ–ಮಸಿ–ಕೃಷಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಲೇಖಕರು ಹೇಳಿದ್ದಾರೆ. ಇಂದು ರೈತರು ಸಾಕಷ್ಟು ಬವಣೆಗಳನ್ನು ಎದುರಿಸುತ್ತಿದ್ದಾರೆ. ಮಳೆಯ ಅಭಾವ, ಅತಿವೃಷ್ಟಿ, ಭೂಮಿ ಬರಡಾಗುತ್ತಿರುವುದು, ಕಳಪೆ ಬೀಜಗಳು ಇವೇ ಮೊದಲಾದ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಈ ಎಲ್ಲಾ ಸಮಸ್ಯೆಗಳಿಂದ ಈ ಬದುಕೇ ನಶ್ವರ ಎನ್ನುವ ಭಾವನೆ ರೈತರಲ್ಲಿ ಬಂದಿದ್ದರೂ ಸಹ ಅವರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳುತ್ತಿದ್ದಾರೆ ಎಂದು ಅವರ ಧೈರ್ಯವನ್ನು ಮೆಚ್ಚಿ ಈ ಮಾತುಗಳನ್ನು ಹೇಳಿದ್ದಾರೆ.<br>ಈ ಮಾತಿನಲ್ಲಿ ರೈತರಲ್ಲಿರುವ ಉತ್ಸಾಹ, ಬದುಕನ್ನು ಪ್ರೀತಿಸುವ ರೀತಿ ಅಭಿವ್ಯಕ್ತಗೊಂಡಿದೆ. | |
| 30. | "ಲಂಡನ್ ಮಲಗಿ ನಿದ್ರಿಸುತ್ತದೆಯೇ ಅನಿಸುತ್ತದೆ."<br>***ಉತ್ತರ :***<br>ಈ ವಾಕ್ಯವನ್ನು ಡಾ. ಬಸವಪ್ರಭು ಪಾಟೀಲ ಹಾಗೂ ಕೆ. ಸಿದ್ದಯ್ಯಸ್ವಾಮಿಯವರು ಬರೆದಿರುವ 'ಯುರೋಪಿನಲ್ಲಿ' ಎಂಬ ಪ್ರವಾಸ ಕಥನದಿಂದ ಆಯ್ದ 'ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಲೇಖಕರು ಹೇಳಿದ್ದಾರೆ. ಲಂಡನ್ ಸುಂದರವಾದ ನಗರ. ಔದ್ಯಮಿಕ, ಬ್ಯಾಂಕಿಂಗ್ ನಗರ. ಸದಾ ಜನಸಂದಣಿಯಿಂದ ಕೂಡಿರುವ ಲಂಡನ್‌ನಗರದ ಮಧ್ಯದಿಂದ ಹೊರವಲಯದ ಕಡೆಗೆ ಬಂದಂತೆಲ್ಲ ಲಂಡನ್ ಮಲಗಿ ನಿದ್ರಿಸುತ್ತದೆಯೋ ಎನ್ನುವಷ್ಟು ನಿಶ್ಶಬ್ದವಾಗಿರುತ್ತದೆ. ರಸ್ತೆ ಮೇಲೆ ಕಾರುಗಳು, ಮನೆ ಮುಂದೆ ಜನಗಳೇ ಇಲ್ಲ ಅಷ್ಟು ಪ್ರಶಾಂತವಾಗಿದೆ ಎಂದು ತಿಳಿಸುತ್ತಾ ಲೇಖಕರು ಈ ಮಾತನ್ನು ಹೇಳಿದ್ದಾರೆ.<br>ಈ ಸಾಲಿನಲ್ಲಿ ಅಷ್ಟು ದೊಡ್ಡ ನಗರಿಯಲ್ಲಿನ ನಿಶ್ಶಬ್ದತೆಯನ್ನು ವ್ಯಕ್ತಪಡಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 31. | "ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು."<br>*ಉತ್ತರ :*<br>ಈ ಮೇಲಿನ ವಾಕ್ಯವನ್ನು ಕುವೆಂಪು ಅವರು ಬರೆದಿರುವ 'ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ 'ನನ್ನ ಗೋಪಾಲ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಗೋಪಾಲನು ತನ್ನ ತಾಯಿಗೆ ಹೇಳುತ್ತಾನೆ. ದೇವರ ಪೂಜೆಗೆ ಹೂಗಳನ್ನು ತರಲು ಹೋದ ಗೋಪಾಲನು ಆ ಬನದ ಸೊಗಸನ್ನು ತನ್ನ ತಾಯಿಯ ಬಳಿ ವರ್ಣಿಸುತ್ತಾ ಅಲ್ಲಿರುವ ಮಲ್ಲಿಗೆ, ಕೇದಗೆ, ಸಂಪಿಗೆ, ಪರ್ವತಬಾಳೆ, ಗೋರಂಟಿ ಹೂಗಳ ಸೊಗಸು ಸಾವಿರಾರು ಮಳೆಬಿಲ್ಲುಗಳು ಒಟ್ಟಿಗೆ ಸೇರಿ ಕುಣಿದಂತೆ ಕಾಣಿಸುತ್ತಿತ್ತು ಎಂದು ಅಲ್ಲಿನ ಸೌಂದರ್ಯವನ್ನು ವರ್ಣಿಸುವಾಗ ಈ ಮಾತು ಬಂದಿವೆ.<br>ಈ ಸಾಲಿನಲ್ಲಿ ಬನದ ಪ್ರಕೃತಿ ವರ್ಣನೆ ಮನೋಜ್ಞವಾಗಿ ಮೂಡಿ ಬಂದಿರುವುದನ್ನು ಕಾಣಬಹುದು. | |
| 32. | "ಚಿಲಿಪಿಲಿಯ ಕಲರವಕೆ ಮತ್ತೇರಿದೆ."<br>*ಉತ್ತರ :*<br>ಈ ಮೇಲಿನ ವಾಕ್ಯವನ್ನು ಬಸವರಾಜ ಸಾದರ ಅವರು ಬರೆದಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದಿಂದ ಆಯ್ದ 'ಸವಿಚೈತ್ರ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಕವಿಗಳು ಹೇಳಿದ್ದಾರೆ. ಯುಗಾದಿ ಚೈತ್ರಮಾಸದಲ್ಲಿ ಬರುವ ಹಬ್ಬ. ಚೈತ್ರವೆಂದರೆ ವಸಂತ. ಅವನು ಋತುಗಳ ರಾಜ. ಈ ಋತುವಿನಲ್ಲಿ ನೆಲದಮ್ಮ ನವವಧುವಿನಂತೆ ಸುಂದರವಾಗಿ ಕಾಣುತ್ತಾಳೆ. ಗಿಡಮರಗಳು ಹೊಸ ಚಿಗುರಿನಿಂದ ನಳನಳಿಸುತ್ತಿರುತ್ತವೆ. ಎಲ್ಲೆಡೆಯು ನವಚೈತನ್ಯ ತುಂಬಿದೆ. ಕೋಗಿಲೆಗಳು ತಾರಕ ಸ್ವರದಲ್ಲಿ ಕೂಗುತ್ತಿವೆ. ಹಕ್ಕಿಗಳ ಕಲರವ, ಚಿಲಿಪಿಲಿನಾದ ಮೈಮನಗಳಿಗೆ ಮುದವನ್ನು ನೀಡುತ್ತದೆ ಎಂದು ವರ್ಣಿಸುತ್ತಾ ಕವಿಗಳು ಈ ಮಾತನ್ನು ಹೇಳಿದ್ದಾರೆ.<br>ಈ ಸಾಲಿನಲ್ಲಿ ಸವಿಚೈತ್ರದ ಸೊಬಗನ್ನು ಸಂದರವಾಗಿ ವರ್ಣಿಸಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 33. | "ನಾಡನರಿಯವೊಲು ಹಲುಗಿರಿಯೆ ಬಿಡುವೆನೆ."<br>*ಉತ್ತರ :*<br>ಈ ಸಾಲನ್ನು ಕುಮಾರವ್ಯಾಸ ಬರೆದ 'ಕರ್ಣಾಟ ಭಾರತ ಕಥಾಮಂಜರಿ' ಅಥವಾ 'ಗದುಗಿನ ಭಾರತ' ಎಂಬ ಕೃತಿಯಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಅರ್ಜುನನು ಉತ್ತರ ಕುಮಾರನಿಗೆ ಹೇಳಿದನು. ಉತ್ತರ ಕುಮಾರನು ಕೌರವನ ಸೇನಾಸಾಗರವನ್ನು ನೋಡಿ ಭಯದಿಂದ ಓಡಲು ಪ್ರಾರಂಭಿಸಿದನು. ಆಗ ಅವನನ್ನು ತಡೆದ ಅರ್ಜುನನು ಅರಮನೆ ನಾರಿಯರ ಮುಂದೆ ಬಾಯಿಗೆ ಬಂದಂತೆ ಮಾತನಾಡುತ್ತಿದ್ದೆ. ಈಗ ನಾಡನರಿಯಂತೆ ಹಲ್ಲುಕಿರಿಯುತ್ತಾ ಓಡುತ್ತಿರುವೆ. ನೀನು ಹೋಗಲು ಬಿಡುವುದಿಲ್ಲ. ಯುದ್ಧ ಮಾಡು ನಡೆ ಎಂದು ಗದರಿಸುವಾಗ ಅರ್ಜುನನು ಈ ಮಾತನ್ನು ಹೇಳಿದನು.<br>ಈ ಸಾಲಿನಲ್ಲಿ ಉತ್ತರನಲ್ಲಿರುವ ಭಯ, ಅರ್ಜನನ ಪರಾಕ್ರಮ ಅಭಿವ್ಯಕ್ತವಾಗಿದೆ. | |
| IX. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು) | $1 \times 4 = 4$ |
| 34. | ಕೆಸರೊಳಿದ್ದರು ..............................................<br>..............................................................<br>..............................................................<br>............................... ಮನುಜತೆಯ ಸಾರ್ಥಕತೆಗೆ.<br>**ಅಥವಾ**<br>ಒಂದು ಬಾಣಕೆ ..............................................<br>..............................................................<br>..............................................................<br>.................................. ಹೋರಾಡು ಹಗಲಿರುಳು.<br>*ಉತ್ತರ :*<br>ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ<br>ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ<br>ಮಸಗುವಂಬುಜದಂತೆ ಧ್ಯೇಯದಾಳ್ವಿಸಕೆ<br>ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ.<br>**ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಒಂದು ಬಾಣಕೆ ಗುರಿಯು ಹಲವಿರುವುದುಂಟೆ ?<br>ಒಂದು ದೇಹದೊಳಾತ್ಮವೆರಡಿರುವುದುಂಟೆ ?<br>ಒಂದು ಜೀವನಕೇಕೆ ಹಲವು ಸಾಧ್ಯಗಳು ?<br>ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು | |
| X. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 35. | ಸಿದ್ಧಾರ್ಥನು ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕಂಡುಬಂದ ರೀತಿಯನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.<br>***ಅಥವಾ***<br>'ಬೋಧಿವೃಕ್ಷದ ಹಾಡು' ಪದ್ಯದಲ್ಲಿರುವ ಜೀವನ ಮೌಲ್ಯಗಳನ್ನು ಕವಿಯ ಆಶಯದಂತೆ ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ಬದುಕಿನ ಸತ್ಯವನ್ನು ಕಾಣಲು ಸಿದ್ಧಾರ್ಥನು ಕಾಡನ್ನು ಅಲೆದು ಬೋಧಿವೃಕ್ಷದ ಕೆಳಗೆ ಕುಳಿತು ತಪಸ್ಸನ್ನು ಆಚರಿಸಿದನು. ಆಗ ಸಿದ್ಧಾರ್ಥನಿಗೆ ಜ್ಞಾನೋದಯವಾಗಿ ಬುದ್ಧನಾದನು. ಆ ಸಂದರ್ಭದಲ್ಲಿ ಇಡೀ ಪ್ರಕೃತಿಯಲ್ಲಿಯೇ ಪರಿವರ್ತನೆಯನ್ನು ಕಾಣುತ್ತೇವ. ಆಗ ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಾಣಿಸಿದೆ. ಮರವನ್ನು ಅಪ್ಪಿಕೊಂಡ ಬಳ್ಳಿಯಿಂದ ಆಗತಾನೆ ಹೂ ಅರಳಿ ನಳನಳಿಸುತ್ತಿದೆ. ಹಕ್ಕಿ ಮಮತೆಯಿಂದ ತನ್ನ ಮರಿಗೆ ಗುಟುಕು ನೀಡುತ್ತಿದೆ. ಅಲ್ಲೇ ಇದ್ದ ಹುತ್ತದಿಂದ ಇರುವೆಗಳ ಗುಂಪು ಸಾಲು ಸಾಲಾಗಿ ಹರಿದಾಡುತ್ತಿವೆ. ಬೆಳ್ಳಕ್ಕಿಗಳು ಆಕಾಶಕ್ಕೆ ಏಣಿ ಹಾಕಿದಂತೆ ಸ್ವಚ್ಛಂದವಾಗಿ ಹಾರಾಡುತ್ತಿವೆ. ನೀರವವಾಗಿದ್ದ ಕಾಡಿನ ತುಂಬಾ ಪ್ರೀತಿಯ ಹೊಳೆಹರಿದಾಡುತ್ತಿದೆ. ಹಕ್ಕಿಗಳ ಗೂಡುಗಳಿಂದ ಹೊಸಗಾನ ತೇಲಿಬರುತ್ತಿದೆ. ದುಂಬಿಗಳು ಹೂಗಳಲ್ಲಿನ ಮಧುವನ್ನು ಸವಿಯುತ್ತಾ ಝೇಂಕಾರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮಾಡುತ್ತಿವೆ. ಗಿಡಮರಗಳು ಪರಸ್ಪರ ಪ್ರೀತಿಯಿಂದ ಆಲಂಗಿಸಿಕೊಂಡಂತೆ ಕಾಣುತ್ತಿವೆ. ಕಾಡಿನ ತುಂಬಾ ಪ್ರೀತಿಯ ಸೆಲೆ ತುಂಬಿಕೊಂಡಿದೆ. ಪ್ರೀತಿಗೆ ಎಷ್ಟೊಂದು ಶಕ್ತಿಯಿದೆ ಎಂಬುದನ್ನು ಪ್ರಕೃತಿಯ ಈ ವಿಸ್ಮಯ ತೋರಿಸಿಕೊಟ್ಟಿದೆ. | |
| | **ಅಥವಾ** | |
| | ಮಾನವನ ಜೀವನ ಸಾರ್ಥಕವಾಗಬೇಕಾದರೆ ಮೊದಲು ತನ್ನನ್ನು ತಾನು ಅರಿತುಕೊಳ್ಳಬೇಕು. ತಾನು ಆತ್ಮಸಾಕ್ಷಾತ್ಕಾರ ಹೊಂದಿ ನಂತರ ಸಮಾಜದ ಅಂಕುಡೊಂಕುಗಳನ್ನು ತಿದ್ದಬೇಕು. ಈ ರೀತಿ ತಾನು ಆತ್ಮಸಾಕ್ಷಾತ್ಕಾರವನ್ನು ಪಡೆದು ಸಮಾಜವನ್ನು ಪ್ರೀತಿ, ದಯೆ, ಕರುಣೆಯ ಮೂಲಕ ತಿದ್ದಲು ಪ್ರಯತ್ನಿಸಿದ ಮಹಾಜ್ಞಾನಿ ಬುದ್ಧ. ಬುದ್ಧನ ಜೀವನವೆಂದರೆ ಅದು ಯುದ್ಧವನ್ನು ಬಿಟ್ಟು ಪ್ರೀತಿಯನ್ನು ಕೊಟ್ಟ ಕಥೆ. ಆತನದು ಎಲ್ಲಾ ಮೋಹವನ್ನು ತೊರೆದ ಬದುಕು. ಜನಸಾಮಾನ್ಯರ ನೋವಿಗೆ ಸ್ಪಂದಿಸುವುದೇ ಶ್ರೇಷ್ಠವಾದ ಧರ್ಮ. ಮಾನವೀಯತೆ ಇಲ್ಲದ ಬದುಕು ಅದು ಬದುಕೇ ಅಲ್ಲ. ಕಾಡಿನಲ್ಲಿ ಏಕಾಂಗಿಯಾಗಿ ಕುಳಿತು ತಪಸ್ಸು ಮಾಡುವುದಕ್ಕಿಂತ ಜನಸಾಮಾನ್ಯರ ಕಷ್ಟ ಸುಖಗಳಿಗೆ ಸ್ಪಂದಿಸುವುದೇ ನಿಜವಾದ ತಪಸ್ಸು. ತಪಸ್ಸಿಗಿಂತ ಜೀವನ ಪ್ರೀತಿ ದೊಡ್ಡದು. ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದೇ ನಿಜವಾದ ಧರ್ಮದ ತತ್ತ್ವ.ಈ ಹಿನ್ನೆಲೆಯಲ್ಲಿ ಬುದ್ಧನು ಬೋಧಿಸಿದ ಜೀವನ ಮೌಲ್ಯಗಳಾದ ಪ್ರೀತಿ, ಕರುಣೆ, ದಯೆ, ಸತ್ಯ, ಅಹಿಂಸೆ ಇವೇ ಮೊದಲಾದ ಗುಣಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಬಾಳು ಬಂಗಾರವಾಗುತ್ತದೆ ಎಂದು ಅರಿಯಬಹುದು. | |
| XI. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | $1 \times 4 = 4$ (2 + 2) |
| 36. | ನಾವು ಯಾವುದೇ ಕಾರ್ಯದಲ್ಲಿ ಯಶಸ್ಸು ಸಾಧಿಸುವುದಕ್ಕೆ ಮೂರು ಅಂಶಗಳು ಅತ್ಯಗತ್ಯ. ಅವುಗಳೆಂದರೆ ಸತತ ಅಭ್ಯಾಸ, ಇಂದ್ರಿಯ ನಿಗ್ರಹ, ಶ್ರದ್ಧೆ. ನಿರಂತರವಾದ ಅಭ್ಯಾಸದಿಂದ ಅರ್ಥವಾಗದೇ ಇರುವ ಕಷ್ಟಕರ ವಿಷಯವನ್ನಾದರೂ ಅರ್ಥಮಾಡಿಕೊಳ್ಳಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನಿರಂತರ ಅಭ್ಯಾಸದಿಂದ ಅಸಾಧ್ಯವಾದುದನ್ನು ಸಾಧಿಸಬಹುದು. ಸತತ ಅಭ್ಯಾಸ ಮನಸ್ಸನ್ನು ಏಕಾಗ್ರಗೊಳಿಸಿ ಆ ವಿಷಯದ ಮೇಲೆ ಪ್ರಭುತ್ವವನ್ನು ಸಾಧಿಸುವಂತೆ ಮಾಡುತ್ತದೆ. ಇದು ನನ್ನಿಂದ ಸಾಧ್ಯ ಎಂಬ ಸಕಾರಾತ್ಮಕ ಮನೋಭಾವವನ್ನು ಮೂಡಿಸುತ್ತದೆ. ಒಂದೊಂದು ಇಂದ್ರಿಯಗಳು ಒಂದೊಂದು ಕಡೆ ಎಳೆಯುತ್ತಿದ್ದರೆ ಗುರಿಯನ್ನು ಮುಟ್ಟಲು ಸಾಧ್ಯವಾಗುವುದಿಲ್ಲ. ಇಂದ್ರಿಯಗಳ ಮೇಲೆ ಹತೋಟಿಯನ್ನು ಸಾಧಿಸಬೇಕು. ಇಂದ್ರಿಯ ನಿಗ್ರಹ ಯಶಸ್ಸನ್ನು ಸಾಧಿಸುವಲ್ಲಿ ಪ್ರಮುಖವಾದ ಮೆಟ್ಟಿಲಾಗಿದೆ. ನಮ್ಮ ಬಾಳಿನ ಸಾರ್ಥಕತೆಗೆ ಶುದ್ಧ ಮತ್ತು ಪ್ರಾಮಾಣಿಕ ಮನಸ್ಸು ಅತ್ಯಗತ್ಯ. ಅಂತಹ ಮನಸ್ಸಿನ ಪ್ರಪ್ರಥಮ ಗುಣವೇ ಪರಿಪೂರ್ಣ ಶ್ರದ್ಧೆ. ಇದು ನಮ್ಮ ಮನಸ್ಸು ನೈಜ ಮತ್ತು ಒಳಿತಿನ ಮೌಲ್ಯವನ್ನು ತಾನೇತಾನಾಗಿ ಸ್ವೀಕರಿಸುವಂತೆ ಮಾಡುತ್ತದೆ. ಶ್ರದ್ಧೆ ನಮ್ಮನ್ನು ಗುರಿಯತ್ತ ಮುನ್ನುಗ್ಗಲು ಉತ್ಸಾಹವನ್ನು ತುಂಬಿಸುವ ಶಕ್ತಿಯಾಗಿದೆ. ಪರಿಶ್ರಮ ಮತ್ತು ಪ್ರಾಮಾಣಿಕತೆಗಳೇ ಶ್ರದ್ಧೆಯ ಮೂಲಾಂಶಗಳು. ಶ್ರದ್ಧೆ ಒಂದು ಅಚಲವಾದ ಮತ್ತು ಕ್ರಿಯಾತ್ಮಕವಾದ ನಂಬಿಕೆ. ಇದು ನಮ್ಮನ್ನು ನಾವು ಕೈಗೊಂಡ ಕಾರ್ಯದಲ್ಲಿ ಮುನ್ನುಗ್ಗುವಂತೆ ಮಾಡುತ್ತದೆ. ಶ್ರದ್ಧೆ ಎಂದರೆ ಮನುಷ್ಯನ ಪ್ರಯೋಗಶೀಲವಾದ ಮನಸ್ಸು ಕೈಗೊಳ್ಳುವ ಸಾಹಸ ಎಂದು ತಿಳಿಯಬೇಕು. ಶ್ರದ್ಧೆಯುಳ್ಳವನಿಗೆ ಜ್ಞಾನವು ಲಭಿಸುತ್ತದೆ. ಶ್ರದ್ಧೆ ಜ್ಞಾನವನ್ನು ಸಮರ್ಥವಾಗಿ ಸ್ವೀಕರಿಸುವ ಪರಿಶುದ್ಧ ಮನಃಪಕ್ವತೆಯನ್ನು ನಮ್ಮಲ್ಲಿ ಉಂಟುಮಾಡುತ್ತದೆ. ಶ್ರದ್ಧೆಯಿಲ್ಲದೆ ಕಲಿತ ಕಲಿಕೆ ಜ್ಞಾನವಾಗದು. ಶೈಕ್ಷಣಿಕ ಪರೀಕ್ಷೆಯಲ್ಲಾಗಲೀ ಜೀವನದ ಪರೀಕ್ಷೆಯಲ್ಲಾಗಲೀ ಸಂಪೂರ್ಣ ಯಶಸ್ಸನ್ನು ಗಳಿಸುವುದಕ್ಕೆ ಪರಿಪೂರ್ಣ ಶ್ರದ್ಧೆ ಇರಬೇಕು. ನಾವು ಶ್ರದ್ಧೆಯಿಂದ ಕೆಲಸ ಮಾಡಬೇಕೇ ಹೊರತು ಸ್ಪರ್ಧೆಯಿಂದ ಅಲ್ಲ, ಶ್ರದ್ಧೆಯಿಂದ ಮಾಡಿದ ಕೆಲಸಕಾರ್ಯಗಳು ಯಶಸ್ವಿಯಾಗುತ್ತವೆ ಜೊತೆಗೆ ನಮಗೆ ಸಂತೃಪ್ತಿಯನ್ನು ನೀಡುತ್ತವೆ.<br><br>*ಪ್ರಶ್ನೆಗಳು :*<br><br>ಅ) ಯಶಸ್ಸಿನ ನಿಜವಾದ ಮೆಟ್ಟಿಲುಗಳಾವುವು ?<br><br>ಬ) ಶ್ರದ್ಧೆಯುಳ್ಳವನಿಗೆ ಜ್ಞಾನವು ಹೇಗೆ ಲಭಿಸುತ್ತದೆ ? | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಉತ್ತರ :* | |
| | ಅ) ಯಶಸ್ಸಿನ ನಿಜವಾದ ಮೆಟ್ಟಿಲುಗಳಾವುವೆಂದರೆ ಸತತ ಅಭ್ಯಾಸ ಇಂದ್ರಿಯ ನಿಗ್ರಹ, ಶ್ರದ್ಧೆ. ನಿರಂತರವಾದ ಅಭ್ಯಾಸದಿಂದ ಅರ್ಥವಾಗದೇ ಇರುವ ಕಷ್ಟಕರ ವಿಷಯವನ್ನಾದರೂ ಅರ್ಥಮಾಡಿಕೊಳ್ಳಬಹುದು. ನಿರಂತರ ಅಭ್ಯಾಸದಿಂದ ಅಸಾಧ್ಯವಾದುದನ್ನು ಸಾಧಿಸಬಹುದು. ಸತತ ಅಭ್ಯಾಸವು ಮನಸ್ಸನ್ನು ಏಕಾಗ್ರಗೊಳಿಸಿ ಆ ವಿಷಯದ ಮೇಲೆ ಪ್ರಭುತ್ವ ಬರುವಂತೆ ಮಾಡುತ್ತದೆ. ಸಕಾರಾತ್ಮಕ ಮನೋಭಾವವನ್ನು ಬೆಳೆಸುತ್ತದೆ. ಇಂದ್ರಿಯ ನಿಗ್ರಹ ಯಶಸ್ಸಿನ ಪ್ರಮುಖ ಮೆಟ್ಟಿಲಾಗಿದೆ. ಇಂದ್ರಿಯಗಳ ಮೇಲೆ ಹತೋಟಿ ಸಾಧಿಸಬೇಕು. ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕು. ಆಗ ಯಶಸ್ಸು ಖಂಡಿತಾ ಸಿಕ್ಕೇ ಸಿಗುತ್ತದೆ. | |
| | ಬ) ಶ್ರದ್ಧೆಯುಳ್ಳವನಿಗೆ ಜ್ಞಾನವು ಲಭಿಸುತ್ತದೆ. ಶ್ರದ್ಧೆಯಿಲ್ಲದೆ ಕಲಿತ ಕಲಿಕೆ ಜ್ಞಾನವಾಗಲಾರದು. ಶೈಕ್ಷಣಿಕ ಪರೀಕ್ಷೆಯಲ್ಲಾಗಲೀ, ಜೀವನದ ಪರೀಕ್ಷೆಯಲ್ಲಾಗಲೀ ಸಂಪೂರ್ಣ ಯಶಸ್ಸಿಗೆ ಸಂಪೂರ್ಣ ಶ್ರದ್ಧೆ ಇರಬೇಕು. ನಮ್ಮ ಕೆಲಸ ಕಾರ್ಯಗಳು ಯಶಸ್ವಿಯಾಗುವುದು, ಅವು ಫಲ ನೀಡುವುದು ಶ್ರದ್ಧೆ ಇದ್ದಾಗ ಮಾತ್ರ, ಶ್ರದ್ಧೆ ಇದ್ದರೆ ಗುರಿಯನ್ನು ಮುಟ್ಟಬಹುದು. ಸಂಪೂರ್ಣ ಜ್ಞಾನವನ್ನೂ ಸಹ ಗಳಿಸಬಹುದು. ಆದ್ದರಿಂದ ಶ್ರದ್ಧಾವಂತನಿಗೆ ಮಾತ್ರ ಜ್ಞಾನವು ಲಭಿಸಲು ಸಾಧ್ಯ. | |
| XII. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | $1 \times 4 = 4$ |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ಸಾವಯವ ಕೃಷಿ<br>***ಅಥವಾ***<br>ವೃತ್ತಪತ್ರಿಕೆಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XIII. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 5 = 5 |
| 38. | ನಿಮ್ಮನ್ನು ಬೀದರಿನ ಸರ್ಕಾರಿ ಪ್ರೌಢಶಾಲೆಯ 'ಶ್ರೀಗೌರಿ' ಎಂದು ಭಾವಿಸಿಕೊಂಡು, ನಿಮ್ಮ ಪರೀಕ್ಷಾ ತಯಾರಿಯನ್ನು ವಿವರಿಸಿ ಉಡುಪಿಯ ರಥಬೀದಿಯಲ್ಲಿ ವಾಸವಾಗಿರುವ 'ಗಂಗಾಧರ' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ 'ಮುತಾಹಿರ್' ಎಂದು ಭಾವಿಸಿಕೊಂಡು, ಶಾಲೆಯ ಗ್ರಂಥಾಲಯಕ್ಕೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪುಸ್ತಕಗಳನ್ನು ತರಿಸಿಕೊಡುವಂತೆ ಕೋರಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಿಗೆ ಮನವಿ ಪತ್ರವನ್ನು ಬರೆಯಿರಿ. | |
| | ***ಉತ್ತರ :*** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| | ***ಅಥವಾ*** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |